ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಎಸ್. ಸುರೇಶ್ ಕುಮಾರ್ (ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು :– ಮಾನ್ಯ ಅಧ್ಯಕ್ಷರೆ, ದಿನಾಂಕ 06–02 2012ರ 5ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 129 ಪ್ರಶ್ನೆಗಳ ಪೈಕಿ 107 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತೆದ್ದೇನೆ.

ಅಧ್ಯಕ್ಷರು :– ಮಂಡಿಸಲಾಯಿತು. (ಅನುಬಂಧ–1)

2. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

II) ವಿಷಯ: ನಿಡಗುಂದಿಯಿಂದ ಮುದ್ದೇಬಿಹಾಳಕ್ಕೆ ಹೋಗುವ ರಸ್ತೆಯನ್ನು ರಿಪೇರಿ ಮಾಡುವ ಬಗ್ಗೆ.

ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ) :– ಮಾನ್ಯ ಅಧ್ಯಕ್ಷರೆ, ಬಿಜಾಪುರ ಜಿಲ್ಲೆಗೆ ಸೇರಿದ ನಿಡಗುಂದಿಯಿಂದ ಮುದ್ದೇಬಿಹಾಳಕ್ಕೆ ಹೋಗುವ ರಸ್ತೆಯನ್ನು ರಿಪೇರಿ ಮಾಡಬೇಕೆಂದು ಹೇಳಿ ಅಲ್ಲಿನ ಸಾರ್ವಜನಿಕರು ಬಂದ್‌ಗೆ ಕರೆ ಕೊಟ್ಟಿದ್ದಾರೆ. ಬಂದ್‌ಗೆ ಕರೆ ಕೊಟ್ಟು ಸತ್ಯಾಗ್ರಹ ನಡೆಸಿದರೂ ಕೂಡ ಇದುವರೆಗೂ ಇದರ ಬಗ್ಗೆ ಯಾರೂ ಕೂಡ ಕ್ರಮ ಕೈಗೊಳ್ಳುತ್ತಿಲ್ಲ. ಜನಗಳಿಗೆ ಸರಿಯಾದ ರಸ್ತೆಯಿಲ್ಲದೇ ತುಂಬಾ ತೊಂದರೆ ಅನುಭವಿಸುತ್ತಿದ್ದಾರೆ. ಈ ಬಗ್ಗೆ ನಾನು ಮಾನ್ಯ ಲೋಕೋಪಯೋಗಿ ಇಲಾಖೆಯ ಸಚಿವರ ಗಮನ ಸೆಳೆಯಲು ಇಚ್ಛೆ ಪಡುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :– ಮಾನ್ಯ ಅಧ್ಯಕ್ಷರೆ, ಇಲ್ಲಿ ಎರಡು ವಿಚಾರಗಳು ಇವೆ. ಯಾವ ವಿಚಾರವನ್ನು ಇವರು ಪ್ರಸ್ತಾಪ ಮಾಡಲು ಬಯಸುತ್ತಿದ್ದಾರೆ ? ತಕ್ಷಣಕ್ಕೆ ಉತ್ತರಗಳನ್ನು ಒದಗಿಸುವುದಕ್ಕೆ ಕಷ್ಟವಾಗುತ್ತದೆ. ಮಾನ್ಯ ಸದಸ್ಯರು ಏನೊಂದು ಪ್ರಸ್ತಾಪಿಸಿದ್ದಾರೋ, ಅದಕ್ಕೆ ಉತ್ತರವನ್ನು ಕೊಡಿಸುವುದಕ್ಕೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ) :– Immediate reply ಅನ್ನು ನಾನೂ ಕೂಡ ಬಯಸುತ್ತಿಲ್ಲ. ಅಲ್ಲಿರುವ ವಿಚಾರದ ಬಗ್ಗೆ ಸರ್ಕಾರದ ಗಮನ ಸೆಳೆದಿದ್ದೇನೆ. ದಯವಿಟ್ಟು ಈ ಬಗ್ಗೆ ಗಮನಹರಿಸಿ. ಅಲ್ಲಿನ ಪರಿಸ್ಥಿತಿಯನ್ನು ನಿಯಂತ್ರಣ ಮಾಡಲಿಕ್ಕೆ

ಅಲ್ಲಿ ಬಂದ್‌ಗೆ ಕರೆ ಕೊಟ್ಟಿರುವ ಜನರ ಮನಮೊಲಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಅಲ್ಲಿರುವ ರಸ್ತೆಗಳ ರಿಪೇರಿಯನ್ನು ಮಾಡಲು PWD ಯವರು ಕ್ರಮ ತೆಗೆದುಕೊಳ್ಳಬೇಕು. ಮಾನ್ಯ ಬೊಮ್ಮಾಯಿ ಸಾಹೇಬರ ನೀರಾವರಿ ಇಲಾಖೆಗೆ ಸೇರಿದ ರಸ್ತೆಗಳೂ ಸಹ ಇವೆ. ಅಲ್ಲಿ ಜನ ಗಲಾಟೆ ಮಾಡುತ್ತಿದ್ದಾರೆ. ಮೊನ್ನೆ ಮಾನ್ಯ Law Minister ರವರೂ ಸಹ ಅಲ್ಲಿಗೆ ಭೇಟಿ ಕೊಟ್ಟಿದ್ದರು. ಇವತ್ತು ಅಲ್ಲಿ ಊರಿನ ಜನರು, ಕಾಲೇಜು ಹುಡುಗರು ಎಲ್ಲರೂ ಸೇರಿ ಪುನಃ ಬಂದ್ ಮಾಡಿದ್ದಾರೆ. ನಮ್ಮ ದುರ್ದೈವವೆಂದರೆ, ಅಲ್ಲಿನ ಶಾಸಕನಾದ ನಾನು ಅಪವಾದಕ್ಕೆ ಗುರಿಯಾಗುತ್ತಿದ್ದೇನೆ.

ಶ್ರೀ ಬಸವರಾಜ್ ಬೊಮ್ಮಾಯಿ :– ಮಾನ್ಯ ಅಧಕ್ಷರೆ, ಈಗಾಗಲೇ ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ರಸ್ತೆಗಳ ರಿಪೇರಿಗೆ ಕ್ರಮ ವಹಿಸಲಾಗಿದೆ. ನಾವು ಕ್ರಮ ಕೈಗೊಂಡಿರುವುದರ ಬಗ್ಗೆ ಮಾನ್ಯ ಸದಸ್ಯರಿಗೂ ತಿಳಿಸಿದ್ದೇವೆ. ರಸ್ತೆಗಳ ರಿಪೇರಿಗಾಗಿ ನಬಾರ್ಡ್‌ಗೆ ಪ್ರಸ್ತಾವನೆ ಕಳುಹಿಸಿದ್ದೇವೆ. ಬಹುತೇಕ ಮುಂದಿನ 10–15 ದಿನಗಳಲ್ಲಿ ಅದು ಅಂಗೀಕಾರವಾಗಿ ಬರುತ್ತದೆ. ಅದು ಬಂದ ತಕ್ಷಣ, ಅದರ ರಿಪೇರಿ ಕೆಲಸವನ್ನು ತೆಗೆದುಕೊಳ್ಳುತ್ತೇವೆ. ಯಾವ ರಸ್ತೆ ರಿಪೇರಿ ಸಂಬಂಧ strike ಮಾಡುತ್ತಿದ್ದಾರೋ ನನಗೆ ಗೊತ್ತಿಲ್ಲ. ಒಂದು ವೇಳೆ ಅವರು KRDCL ರಸ್ತೆಗಳ ರಿಪೇರಿ ಬಗ್ಗೆ ಮಾತನಾಡುತ್ತಿದ್ದರೆ, ಅದು PWD ವ್ಯಾಪ್ತಿಗೆ ಬರುತ್ತದೆ. ಸದ್ಯಕ್ಕೆ ನಮ್ಮ ಇಲಾಖೆ ವ್ಯಾಪ್ತಿಗೆ ಬರುವ ರಸ್ತೆಗಳ ರಪೇರಿ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ ಎಂದಷ್ಟೇ ಹೇಳಬಯಸುತ್ತೇನೆ.

ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ) :– ಮಾನ್ಯ ಅಧ್ಯಕ್ಷರೆ, State Highway Improvement Projectನ first phase ನಲ್ಲಿ ಕೈಗೆತ್ತಿಕೊಳ್ಳತಕ್ಕ ಕಾಮಗಾರಿಗಳಲ್ಲಿ ಇದೂ ಸೇರಿದೆ. ಈಗ ಮಾನ್ಯ ಮುಖ್ಯಮಂತ್ರಿಗಳ ಮುಂದೆ ಆ ಪ್ರಸ್ತಾವನೆ ಇದೆ. ಇಡೀ ರಾಜ್ಯದ ಎಲ್ಲಾ ರಸ್ತೆಗಳ ರಿಪೇರಿ ಮಾಡುವುದಕ್ಕೆ ಸುಮಾರು ಎರಡು ಸಾವಿರ ಕೋಟಿ ರೂ.ಗಳು ಬೇಕಾಗುತ್ತದೆ. ಇದನ್ನು ದಯವಿಟ್ಟು ಆದ್ಯತೆ ಮೇರೆಗೆ ರಿಪೇರಿಗೆ ಕೈಗೆತ್ತಿಕೊಳ್ಳಬೇಕು. Please take it on priority. ಅಲ್ಲಿ ಕಳೆದ 4–5 ವರ್ಷಗಳಿಂದ ಸಂಚಾರ ಮಾಡಲಿಕ್ಕಾಗುತ್ತಿಲ್ಲ. ಮಾನ್ಯ ಬೊಮ್ಮಾಯಿಯವರಿಗೆ ಇದು ಗೊತ್ತಿದೆ. ದಯವಿಟ್ಟು ಮಂತ್ರಿಗಳು ಸ್ವಲ್ಪ ಈ ಕಡೆಗೆ ಗಮನಹರಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.